# ಉಪ ತಹಶೀಲ್ದಾರರು, ನಾಡ ಕಾರ್ಯಲಯ, ಇಟ್ಟಿಗಿ ರವರ ನ್ಯಾಯಾಲಯ

| ಅರ್ಜಿದಾರರು | ತಕರಾರುದಾರರು |
|---|---|
| 1)ಎಸ್.ಲಿಂಗನಗೌಡ ತಂದೆ ದಿ//ಎಸ್.ಚನ್ನನಗೌಡ,<br>2)ಎಸ್.ಕರಿಯಮ್ಮ ತಂದೆ ದಿ//ಎಸ್.ಚನ್ನನಗೌಡ,<br>3)ಎಸ್.ಎಸ್.ಪ್ರಕಾಶ್ ತಂದೆ ದಿ//ಎಸ್.ಚನ್ನನಗೌಡ,<br>4)ಎಸ್.ಕೊಟ್ರಗೌಡ ತಂದೆ ದಿ//ಎಸ್.ಚನ್ನನಗೌಡ,<br>5)ಸಕ್ರಗೌಡ ಗಿರೀಶ ತಂದೆ ಸಾಂತಪ್ಪ,<br>ತಳಕಲ್ಲು ಗ್ರಾಮ, ಹಡಗಲಿ ತಾ. | ಸಕ್ರಗೌಡ ಕೊಟ್ರಗೌಡ ತಂದೆ ಚನ್ನನಗೌಡ,<br>ತಳಕಲ್ಲು ಗ್ರಾಮ, ಹಡಗಲಿ ತಾ. |

**ವಿವಾದಿತ ಜಮೀನಿನ ವಿವರ:**

| ಕ್ರ.ಸಂ. | ಗ್ರಾಮದ ಹೆಸರು | ಸರ್ವೆ ನಂಬರ್ | ವಿಸ್ತೀರ್ಣ | ತರಹೆ |
|---|---|---|---|---|
| 1. | ಮಹಜನದಹಳ್ಳಿ | 20/ಬಿ | 2–10 | ಖುಷ್ಕಿ |

**ಪೀಠಿಕೆ:–**

ಬಳ್ಳಾರಿ ಜಿಲ್ಲೆ ಹಡಗಲಿ ತಾಲೂಕಿನ ಮಹಜನದಹಳ್ಳಿ ಗ್ರಾಮದ ಸ.ನಂ.20/ಬಿ ವಿ:2–10 ಎಕರೆ ಜಮೀನಿಗೆ ಸಂಬಂಧಿಸಿದಂತೆ, ತಳಕಲ್ಲು ಗ್ರಾಮದ ನಿವಾಸಿಯಾದ 1)ಎಸ್.ಲಿಂಗನಗೌಡ ತಂದೆ ದಿ//ಎಸ್.ಚನ್ನನಗೌಡ, 2)ಎಸ್.ಕರಿಯಮ್ಮ ತಂದೆ ದಿ//ಎಸ್.ಚನ್ನನಗೌಡ, 3)ಎಸ್.ಎಸ್.ಪ್ರಕಾಶ್ ತಂದೆ ದಿ//ಎಸ್.ಚನ್ನನಗೌಡ, ಮತ್ತು 4)ಎಸ್.ಕೊಟ್ರಗೌಡ ತಂದೆ ದಿ//ಎಸ್.ಚನ್ನನಗೌಡ ಇವರಿಂದ ತಳಕಲ್ಲು ಗ್ರಾಮದ ನಿವಾಸಿಯಾದ ಸಕ್ರಗೌಡ ಗಿರೀಶ ತಂದೆ ಸಾಂತಪ್ಪ ಇವರು ನೋಂದಾಯಿತ ದಸ್ತಾವೇಜು ಸಂಖ್ಯೆ 3698/15–16 ದಿ:05–01–2016 ರಂದು ಖರೀದಿಸಿರುತ್ತಾರೆ ಎಂದು ಉಪನೋಂದಣಾಧಿಕಾರಿಗಳು, ಹೂವಿನಹಡಗಲಿ ರವರು ವರದಿ ಸಲ್ಲಿಸಿರುತ್ತಾರೆ. ಗ್ರಾಮದಲ್ಲಿ ನಮೂನೆ 21 ರ ನೋಟಿಸನ್ನು ದಿ:07–01–2016 ರಂದು ಜಾರಿ ಮಾಡಲಾಗಿ ನಿಗದಿತ ಅವಧಿಯೊಳಗೆ ಅಂದರೆ ದಿ:01–02–2016 ರಂದು ತಳಕಲ್ಲು ಗ್ರಾಮದ ನಿವಾಸಿಯಾದ ಸಕ್ರಗೌಡ ಕೊಟ್ರಗೌಡ ತಂದೆ ಚನ್ನನಗೌಡ ಇವರು ತಕರಾರು ಅರ್ಜಿ ಸಲ್ಲಿಸಿರುತ್ತಾರೆ. ಕಂದಾಯ ನಿರೀಕ್ಷಕರು, ಇಟ್ಟಿಗಿ ರವರು M.NO.28/15-16 ರ ಕಡತವನ್ನು ವಿವಾದಾಸ್ಪದ ಪ್ರಕರಣವೆಂದು ಪರಿಗಣಿಸಿ ಈ ಕಾರ್ಯಾಲಯಕ್ಕೆ ವರದಿ ಸಲ್ಲಿಸಿರುತ್ತಾರೆ. ಉಭಯ ಪಕ್ಷದವರಿಗೆ ವಿಚಾರಣೆ ದಿನಾಂಕ 06–04–2016 ರಂದು ಹಾಜರಾಗಲು ನೋಟೀಸ್ ನೀಡಲಾಯಿತು.

ಅರ್ಜಿದಾರರು ಮತ್ತು ತಕರಾರುದಾರು ಪ್ರಕರಣದ ವಿಚಾರಣೆಗೆ ಹಾಜರಾಗಿರುತ್ತಾರೆ. ತಕರಾರುದಾರರು ಖರೀದಿ ಪತ್ರದ ಪ್ರಕಾರ ಹಕ್ಕು ಬದಲಾವಣೆ ಮಾಡಲು ತನ್ನದು ಯಾವುದೇ ತಕರಾರು ಇರುವುದಿಲ್ಲ ಎಂದು ಮೌಖಿಕವಾಗಿ ತಿಳಿಸಿರುತ್ತಾರೆ.

ಸದರಿ ಪ್ರಕರಣದಲ್ಲಿ ಅರ್ಜಿದಾರ–4 ರವರೇ ತಕರಾರುದಾರರಾಗಿರುತ್ತಾರೆ. ಅರ್ಜಿದಾರ–1 ರಿಂದ 3 ಮತ್ತು ತಕರಾರುದಾರರು ಸಹೋದರರಾಗಿರುತ್ತಾರೆ. ಖರೀದಿದಾರರಾದ ಸಕ್ರಗೌಡ ಗಿರೀಶ ತಂದೆ ಸಾಂತಪ್ಪ ಇವರು ವ್ಯವಸಾಯಗಾರರ ಕುಟುಂಬದ ಸದಸಯ ದೃಢೀಕರಣ ಪತ್ರ ಸಂಖ್ಯೆ RD0038456034629 ಸಲ್ಲಿಸಿದ್ದು, ಮಹಾಜನದಹಳ್ಳಿ ಗ್ರಾಮದ ಸ.ನಂ.21/ಸಿ ವಿ:4–02 ಎಕ್ರೆ ಜಮೀನು ಖರೀದಿದಾರರ ತಾಯಿಯಾದ ಎಸ್.ಸಾಂತವ್ವ ಗಂಡ ಶಾಂತನಗೌಡ ತಳಕಲ್ಲು ಇವರ ಹೆಸರಿಗೆ ಇರುವ ಕಂಪ್ಯೂಟರ್ ಪಹಣಿ ಪ್ರತಿ ಹಾಗೂ ವಂಶವೃಕ್ಷದ ಅಫಿಡವಿಟ್ ಪ್ರತಿಯನ್ನು ಸಲ್ಲಿಸಿರುತ್ತಾರೆ. ಉಭಯರು ಸಲ್ಲಿಸಿದ ದಾಖಲೆ ಮತ್ತು ಹೇಳಿಕೆಗಳನ್ನು ಪರಿಶೀಲಿಸಲಾಯಿತು. ತಕರಾರುದಾರರು ಖರೀದಿ ಪತ್ರದ ಪ್ರಕಾರ ಹಕ್ಕು ಬದಲಾವಣೆ ಮಾಡಲು ತಮ್ಮದು ಯಾವುದೇ ತಕರಾರು ಇರುವುದಿಲ್ಲ ಎಂದು ತಿಳಿಸಿರುವುದರಿಂದ ಈ ಕೆಳಕಂಡಂತೆ ಆದೇಶ.

ಸಂ/ಕಂ/ನಾ.ಕಾ.ಇ/ಪಹಣಿ/ವಿವಾದ/18/2015–16

ದಿನಾಂಕ:14–06–2016

**ಆದೇಶ**

ಪೀಟೀಕೆಯಲ್ಲಿ ವಿವರಿಸಿದ ವಾಸ್ತವಾಂಶ ಮತ್ತು ಕಾರಣಗಳ ಹಿನ್ನೆಲೆಯಲ್ಲಿ ಕರ್ನಾಟಕ ಭೂ ಕಂದಾಯ ಕಾಯ್ದೆ 1964ರ ಕಲಂ 128 ಮತ್ತು 129ರ ಪ್ರಕಾರ M.NO.28/15-16 ರ ಪ್ರಕರಣದಲ್ಲಿ ನೋಂದಾಯಿತ ಕ್ರಯ ಪತ್ರದ ಪ್ರಕಾರ ಹಕ್ಕು ಬದಲಾವಣೆ ಮಾಡಲು ಆದೇಶಿಸಿದೆ.

ಉಪ ತಹಶೀಲ್ದಾರರು
ನಾಡ ಕಾರ್ಯಾಲಯ,
ಇಟ್ಟಿಗಿ.

ಪ್ರತಿಯನ್ನು,
ಅರ್ಜಿದಾರರು ಮತ್ತು ತಕರಾರುದಾರು ಇವರಿಗೆ
ಭೂಮಿ ಕೇಂದ್ರ, ತಾಲೂಕು ಕಾರ್ಯಾಲಯ, ಹೂವಿನಹಡಗಲಿ ಇವರಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ
ಶುದ್ಧಪ್ರತಿ ಕಡತಕ್ಕೆ.